# ನಮಸ್ಕಾರ್ರಿ...! ಯಾವ್ಯೂರ್ರಿ? ಅಡ್ಡೆಸರ್ರಿ?

■ ರವಿ ಚಂದರ್

ಸುಮಾರು ಮುವತ್ತು ವರ್ಷಗಳ ಹಿಂದೆ ಬ್ಯಾಂಕ್ ನೌಕರಿಯ ಮೇಲೆ ಬೆಳಗಾವಿ ಜಿಲ್ಲೆಯ ಬೈಲಹೊಂಗಲದಲ್ಲಿ ಮೊದಲ ಬಾರಿ ಕಾಲಿಟ್ಟಾಗ, ಸರಿ ಸುಮಾರು 3 ತಿಂಗಳುಗಳ ಕಾಲ ನನ್ನ ಬಹುವಾಗಿ ಕಾಡಿದ ಪ್ರಶ್ನೆ ಇದು. ಬ್ಯಾಂಕಿನೊಳಗೆ ಕಾಲಿಟ್ಟ ಎಲ್ಲಾ ಗ್ರಾಹಕರದೂ ಇದೇ ಪ್ರಶ್ನೆ.– ಎಲ್ಲರಿಗೂ ನನ್ನ ಪಕ್ಕದಲ್ಲೇ ಇರುತ್ತಿದ್ದ ನನ್ನ ಸಹೋದ್ಯೋಗಿ ಧಾರವಾಡದವರಾದ ಭುಜಂಗ ಅವರು ಕೊಡುತ್ತಿದ್ದ ಉತ್ತರ— ಹೊಸದಾಗಿ ಬಂದಾರ್ರಿ–, ಮೈಸೂರಿನವರ್ರಿ.

ಜೊತೆಗೆ ನನ್ನ ಉತ್ತರ: – ನಮ್ ಕಡೆ ಅಡ್ಡ ಹೆಸರು ಇರೊದಿಲ್ರಿ!

ತಕ್ಷಣ ಅವರ ಕಡೆಯಿಂದ ಒಂದು ಆಶ್ಚರ್ಯಭರಿತ ನೋಟ! – ಹೀಗೂ ಒಂದು ಪ್ರಾಣಿ ಇರಬಹುದೇ ಎಂಬಂತೆ! ಜೊತೆಗೆ ಒಂದು ಉದ್ಗಾರ: ಮತ್ ಹ್ಯಾಂಗ್ರೀ ?!

ನನ್ನ ಹೆಸರಿನ ಜೊತೆ ಅಡ್ಡ ಹೆಸರಿಲ್ಲದೇ ಇರೋದು ನಾನು ಯಾವ ಜನ್ಮದಲ್ಲೋ ಮಾಡಿದ ಪಾಪ ಎಂಬಂತೆ ನನಗೆ ಅನಿಸಿದ್ದರೆ ನನ್ನ ತಪ್ಪೇನಲ್ಲ ಬಿಡಿ! ಬೈಲಹೊಂಗಲದಂತಹ ಸಣ್ಣ ಊರಿನಲ್ಲಿ ಅವರ ಜೀವನವೇ ಅಡ್ಡ ಹೆಸರಿನ ಸುತ್ತ ವ್ಯಾಪಕವಾಗಿ ಬೆಳೆದಿದೆ. ಆದರೆ, ಮೈಸೂರಿನಂತಹ ದೊಡ್ಡ ನಗರಿಯಿಂದ ಬಂದೂ, ಅಡ್ಡ ಹೆಸರಿನ ಬಗ್ಗೆ ನನ್ನ ಅಜ್ಞಾನ ಖಂಡಿತವಾಗಿಯೂ ಕೂಪ ಮಂಡೂಕದ ಪರಿಸ್ಥಿತಿಯೇ ಸರಿ.

ಅಲ್ಲಿಯ ನನ್ನ ಮತ್ತೊಬ್ಬ ಸಹೋದ್ಯೋಗಿ ಅಶೋಕ ಪಾಟಣಕರ ನನಗೆ ಈ ಬಗ್ಗೆ ಸ್ವಲ್ಪ ತಿಳುವಳಿಕೆ ತರಿಸಿದ್ದು. ಅವರ ಪ್ರಕಾರ, ಹೆಸರಿನಲ್ಲಿ ಮೂರು ಭಾಗ— – ಮೊದಲನೇ ಹೆಸರು, ಮಧ್ಯದ ಹೆಸರು ಹಾಗೂ ಕೊನೆಯ ಹೆಸರು. ವಿದೇಶಿ ನಿಯಮದ ಪ್ರಕಾರ, ಫಸ್ಟ್ ನೇಮ್, ಮಿಡ್ಲ್ ನೇಮ್ ಹಾಗೂ ಸರ್ನೇಮ್ ಅಥವಾ ಫ್ಯಾಮಿಲಿ ನೇಮ್ ಎಂದು. ಮೊದಲನೇ ಹೆಸರೆಂದರೆ, ತನ್ನ ಹೆಸರು, ಮಧ್ಯದ ಹೆಸರೆಂದರೆ ತಂದೆಯ ಹೆಸರು ಹಾಗೂ ಕೊನೆಯ ಹೆಸರೆಂದರೆ ಅಡ್ಡ ಹೆಸರು. ಈ ಅಡ್ಡ ಹೆಸರು ಸ್ವಂತ ಊರಿನ ಹೆಸರು.

ಈ ಅರಿವು ಬಂದ ತಕ್ಷಣ, ನಾನು ಹೇಳಿದೆ— ಅರೇ ನಮ್ಮೂರಲ್ಲೂ ಹೀಗೆಯೇ ಇರುವುದು! ವ್ಯತ್ಯಾಸವೆಂದರೆ ಮಧ್ಯದ ಮತ್ತು ಅಡ್ಡ ಹೆಸರುಗಳು ಇನಿಶಿಯಲ್ ಆಗುತ್ತವೆ. ಈ ಪ್ರಕಾರ ನನ್ನ ಅಡ್ಡ ಹೆಸರು ನಮ್ಮೂರಾದ ಹುಣಸೂರು. ಪಾಟಣಕರ್ ಹೇಳಿಕೊಟ್ಟ ಪ್ರಕಾರ, ಅದನ್ನೇ ಹೇಳಲು ಶುರು ಮಾಡಿದೆ. ಆ ಕಡೆಯಲ್ಲಿ ಹಿಂದೆಂದೂ ಕೇಳಿರದ ಈ ಅಡ್ಡ ಹೆಸರಿನಿಂದ ನಮ್ಮ ಬ್ಯಾಂಕಿನ ಗ್ರಾಹಕರು ತೃಪ್ತರಾದಂತೆ ಕಾಣದಿದ್ದರೂ, ನನ್ನನ್ನು ಇತ್ತೀಚಿನ ಅಮೀರ್ ಖಾನ್‌ನ 'ಪಿಕೆ' ಪಾತ್ರದಂತೆ ನೋಡುವುದಂತೂ ನಿಂತಿತು.

ಬ್ಯಾಂಕಿನ ಗ್ರಾಹಕರ ಪೈಕಿ ಹೆಚ್ಚಾಗಿ ಬರುತ್ತಿದ್ದ ಅಡ್ಡ ಹೆಸರುಗಳೆಂದರೆ ಬೆಳಗಾವಿ ಹಾಗೂ ಧಾರವಾಡ ಜಿಲ್ಲೆಯ ಸಣ್ಣ ಸಣ್ಣ ಊರ ಹೆಸರುಗಳು. ಉದಾಹರಣೆಗೆ ಹೂಲಿ, ಮೆಟಗುಡ್ಡ, ಸಂಪಗಾವಿ, ಸಂಗೊಳ್ಳಿ, ಬಾಗೇವಾಡಿ, ಹಿರೇಕುಂಬಿ, ಮರಕುಂಬಿ, ಮುರಗೋಡ, ಬೆಳಗಾವಿ, ಸವದತ್ತಿ, ಮುನವಳ್ಳಿ, ಹೊಸೂರು ಇತ್ಯಾದಿ. ಅದರಲ್ಲೂ ಮೆಟಗುಡ್ಡ ಎನ್ನುವುದು ಬೈಲಹೊಂಗಲದ ಅತ್ಯಂತ ಸುಪರಿಚಿತ ಹೆಸರು.

'ಇದು ಯಾವುದೇ ಊರಿನ ಹೆಸರಿರಲು ಸಾಧ್ಯವೇ ಇಲ್ಲ' ಎಂಬಂತಹ ಹೆಸರುಗಳು ಬಂದಾಗ ನನ್ನ ಗೊಂದಲ ಮಿತಿಮೀರುತ್ತಿತ್ತು. ಈ ರೀತಿ ಮೊದಲು ಪರಿಚಯವಾದ ಹೆಸರು ಗೋಧಿ. ಅದು ನನಗೆ ಬೈಲಹೊಂಗಲದಲ್ಲಿ ಉಳಿದು ಕೊಳ್ಳಲು ಮೊದಲು ಕೋಣೆ ಸಿಕ್ಕಿದ ಮನೆ ಮಾಲೀಕರ ಅಡ್ಡ ಹೆಸರು. ಮತ್ತೊಬ್ಬರು ಬೆಲ್ಲದ.

ಈ ವೈವಿಧ್ಯತೆಯ ಅನುಭವದ ಮೇಲೆ, ಅಡ್ಡ ಹೆಸರುಗಳನ್ನು ಮೂರು ಬಗೆಯಾಗಿ ಗುರುತಿಸಬಹುದು. ಮೊದಲನೆಯದು ಪೂರ್ವಿಕರ ಊರ ಹೆಸರು. ಇದು ಶೇಕಡಾ 80 ಅಡ್ಡ ಹೆಸರುಗಳ ಬಗ್ಗೆ ನಿಜ.

ಎರಡನೆಯದು ಪೂರ್ವಿಕರ ಕುಲಕಸುಬನ್ನು ಗುರುತಿಸಿ ಬೆಳೆದಂತಹ ಅಡ್ಡ ಹೆಸರುಗಳು. ಇದರಲ್ಲಿ ಶೇಕಡಾ 10ರಷ್ಟು ಅಡ್ಡ ಹೆಸರುಗಳನ್ನು ಗುರುತಿಸ ಬಹುದು. ಉದಾಹರಣೆಗೆ, ವೈದ್ಯ, ಪಂಡಿತ, ಪುರೋಹಿತ, ಕುಲಕರ್ಣಿ, ಆಚಾರ್ಯ, ಅಧ್ಯಾಪಕ, ಶಾನುಭೋಗ, ಪಾಟೀಲ, ತಲಾಟಿ, ಜೋಶಿ (ಜೋಯಿಸ), ಭಟ್ಟ, ಭಾಗವತರ್, ಪುರಾಣಿಕ, ಪೂಜಾರಿ, ಮಡಿವಾಳರ, ಕಲ್ಲುಕುಟುಕರ್, ಕಮ್ಮಾರ, ಕುಂಬಾರ, ಇತ್ಯಾದಿ. ಪೂರ್ವಿಕರು ಮಾಡುತ್ತಿದ್ದ ಮೂಲ ವ್ಯಾಪಾರೀ ಕಸುಬಿನ ಅಡ್ಡ ಹೆಸರುಗಳನ್ನೂ ಇದರೊಳಗೇ ಸೇರಿಸ ಬಹುದು. ಉದಾಹರಣೆಗೆ, ಗೋಧಿ, ಅಕ್ಕಿ, ಅವಲಕ್ಕಿ, ಬೆಲ್ಲದ, ತುಪ್ಪದ, ಮೊರಬದ, ಜೋಳದ, ತಂಬಾಕದ, ಮೆಣಸಿನಕಾಯಿ, ಎಣ್ಣಿ, ರೊಟ್ಟಿ, ವಸ್ತ್ರದ, ಮುತ್ತಿನ, ಮೇಸ್ತ್ರಿ, ಎಲಿಗಾರ, ಹೂಗಾರ, ಉಪ್ಪಿನ, ಸಾಂಬ್ರಾಣಿ, ಸೊಪ್ಪಿನ, ಬೆಣ್ಣಿ, ಕವಡಿ ಇತ್ಯಾದಿ.

ಮೇಲಿನ ಎರಡೂ ಪ್ರವರ್ಗಗಳು ಬಹಳ ಸುಲಭ. ಆದರೆ ಉಳಿದ ಶೇಕಡ 10 ಭಾಗ ಬಹಳ ಭಿನ್ನ. ಇದು ಜನರನ್ನು ಗುರುತಿಸಲೆಂದೇ ಕಂಡುಹಿಡಿದಂತಿರುವ ಅಡ್ಡ ಹೆಸರುಗಳು. ಪೂರ್ವಿಕರ ಕಾಲದಲ್ಲಿ ಸಣ್ಣ ಹಳ್ಳಿಗಳಲ್ಲಿ ಯಾವುದೋ ಒಂದು ಘಳಿಗೆಯಲ್ಲಿ ಪ್ರಾರಂಭವಾಗಿರುವ ಸಾಧ್ಯತೆ ಇಂತಹ ಹೆಸರುಗಳ ಮೂಲ ಇರಬಹುದು. ಇಲ್ಲಿ ಹೆಸರಿಗೆ ಮೂಲ ಮರ, ಗಿಡ, ಕಟ್ಟಿ, ಮನಿ, ಇತ್ಯಾದಿ. ಉದಾಹರಣೆಗೆ ವಂಟಿಗೋಡಿ, ಬೇವಿನಮರದ, ಹುಣಶೀಗಿಡದ, ಭಾರೀಗಿಡದ, ಪಟ್ಟೇದ, ಸುಳ್ಳೇದ, ಭಾವೀಕಟ್ಟಿ, ಅರಳೀಕಟ್ಟಿ, ಹುಣಶೀಕಟ್ಟಿ ಇತ್ಯಾದಿ. ರಾಜರಿಂದಲೋ, ಆಳುವವರಿಂದಲೋ ಬಹುಮಾನ, ಬಳುವಳಿ ಪಡೆದಂತಹ ಜನರನ್ನು ಗುರುತಿಸಲು ಜಹಗೀರ್ದಾರ್, ಇನಾಂದಾರ್, ತಾಲೂಕದಾರ್, ದೇಶಮುಖ, ಸರದೇಶಮುಖ, ದೇಸಾಯಿ, ಸರದೇಸಾಯಿ ಇತ್ಯಾದಿ ಅಡ್ಡ ಹೆಸರುಗಳು ಹುಟ್ಟಿಕೊಂಡಿರಬೇಕು.

ಇದರಲ್ಲಿ ಅತ್ಯಂತ ವಿಶಾಲವಾಗಿರುವುದು ಮನಿ ರೂಪಾಂತರಗಳು! ಕಟ್ಟಿಮನಿ, ದೊಡ್ಡಮನಿ, ಹುಲ್ಲಿನಮನಿ, ಹಂಚಿನಮನಿ, ಹೊರಮನಿ, ನಡುವಿನಮನಿ, ಮೂಲಿಮನಿ, ಮೇಲಿನಮನಿ, ಒಳಮನಿ, ದೂರದಮನಿ, ಹಾದಿಮನಿ, ಹಿತ್ತಲಮನಿ, ಭಾವಿಮನಿ, ತೆಗ್ಗಿನಮನಿ, ಹಳ್ಳದಮನಿ.. ಇತ್ಯಾದಿ.

ನಮ್ಮ ಬ್ಯಾಂಕಿನ ಗ್ರಾಹಕರಲ್ಲೊಬ್ಬರು ನರಿ ಎಂಬ ಅಡ್ಡ ಹೆಸರಿನವರು. ಇನ್ನೂ ಕೆಲವು ವಿಚಿತ್ರ ಅಡ್ಡ ಹೆಸರೆಂದರೆ, ರಾಮಣ್ಣವರ್, ರಾವಣವರ್, ಅಕ್ಕಣ್ಣವರ್, ಗಂಗಣ್ಣವರ್, ಟೋಪಣ್ಣವರ್ ಇತ್ಯಾದಿ. ರಾಮಣ್ಣವರ್ ಹೆಸರಿಗೆ ರಾಮನ ಹೆಸರಿನ ಮೂಲ ಇರಬಹುದು; ರಾವಣವರ್ ಹೆಸರಿನ ಮೂಲ ಏನಿರಬಹುದು?

ನನ್ನ ಬೈಲಹೊಂಗಲದ ದಿನಗಳಲ್ಲಿ ಕೇಳಿದ ಮೂರು ಅಡ್ಡ ಹೆಸರುಗಳು ನಾನೆಂದಿಗೂ ಮರೆಯಲಾರೆ. ಅವು – ಲಂಗೋಟಿ, ಒಳಚಡ್ಡಿ ಮತ್ತು ಸುಂಡಿಲಿ. ಮನಿ ಹೆಸರಿನ ರೂಪಾಂತರಗಳಿಗೆ ಸ್ಪರ್ಧಿಯಂತೆ ಮಠದ ರೂಪಾಂತರಗಳಿವೆ.– ಹಿರೇಮಠ, ಕಿರಿಮಠ, ದೊಡ್ಡಮಠ, ಮುಪ್ಪಯ್ಯನವರಮಠ, ವಿರಕ್ತಮಠ, ಬಡೇಕೊಳ್ಳಮಠ. ಇದಲ್ಲದೆ ಆಯಾಯ ಊರಿನ ಹೊಂಗಲಮಠ, ವಂಟಮೂರಿಮಠ, ಶಿಂಪಿಮಠ ಇತ್ಯಾದಿ. ಒಂದು ವಿಚಿತ್ರವಾದುದು ತಿಪ್ಪಿಮಠ. ಇವೆಲ್ಲವೂ ಸ್ವಾಮಿಗಳ ಮನೆತನದವರನ್ನು ಗುರುತಿಸುತ್ತವೆ.

ಜಾತಿ ಗುರುತಿಸುವ ಕಾರ್ಯವನ್ನು ಈ ಅಡ್ಡ ಹೆಸರುಗಳು ಯಶಸ್ವಿಯಾಗಿ ಮಾಡುತ್ತವೆ; ಆದರೆ ಶೇಕಡಾ ನೂರರಷ್ಟಲ್ಲ. ಉದಾಹರಣೆಗೆ, ಕುಲಕರ್ಣಿ ಬ್ರಾಹ್ಮಣ ಹೆಸರಾದರೂ, ಇದೇ ಅಡ್ಡ ಹೆಸರಿನ ಲಿಂಗಾಯತ ಸ್ವಾಮಿಗಳ ಕುಟುಂಬವೊಂದಿದೆ. ಇನಾಮದಾರ್ ಬ್ರಾಹ್ಮಣ ಹಾಗೂ ಮುಸ್ಲಿಮರು ಎರಡರಲ್ಲೂ ನೋಡಿದ್ದೇನೆ. ರಾಮದುರ್ಗದಲ್ಲಿ ಕೆಲಸ ಮಾಡುತ್ತಿದ್ದಾಗ ರಘುವೀರಮಠ ಎಂಬ ಬ್ರಾಹ್ಮಣ ಕುಟುಂಬದ ಅಡ್ಡ ಹೆಸರೊಂದನ್ನು ನೋಡಿದ್ದೇನೆ.

ಮೈಸೂರಿನ ಕಡೆ ಗೌಡ ಎನ್ನುವ ಜಾತಿ ಹೆಸರು ಉತ್ತರ ಕರ್ನಾಟಕದಲ್ಲಿ ಪಾಟೀಲ್ ಆಗಿದೆ. ಇದು ಹಳ್ಳಿಯ ಮುಖ್ಯಸ್ಥನ ಗುರುತು. ಆದರೆ, ಹೆಚ್ಚಿಗೆ ಲಿಂಗಾಯತರ ಪೈಕಿ ಬರುವ ಈ ಅಡ್ಡ ಹೆಸರು, ಅಲ್ಲಲ್ಲಿ ಬ್ರಾಹ್ಮಣರ ಪೈಕಿ ಕೂಡ